No. of Printed Pages : **5**

# 4704

Register Number

## Language - PART I - KANNADA

Time Allowed : 3.00 Hours ] [ Maximum Marks : 90

**ಸೂಚನೆಗಳು :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

### ಭಾಗ - I/PART - I

**ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **14x1=14**

Choose the **correct** Answer.

**1.** ಸೇಡಿಯಾಪು ಕೃಷ್ಣಭಟ್ಟರ ಯಾವ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ ?

(ಅ) ವಿಚಾರ ಪ್ರಪಂಚ (ಆ) ಛಂದೋಗತಿ

(ಇ) ಪಳಮೆಗಳು (ಈ) ಕನ್ನಡ ಛಂದಸ್ಸು

**2.** ದಲಿತ ಕವಿ ಎಂದೇ ಪ್ರಸಿದ್ಧರಾದ ಕವಿ ಯಾರು ?

(ಅ) ಗೊ.ರು. ಚನ್ನಬಸಪ್ಪ (ಆ) ಡಾ. ಜಿ.ಎಸ್. ಶಿವರುದ್ರಪ್ಪ

(ಇ) ರಾಘವಾಂಕ (ಈ) ಸಿದ್ಧಲಿಂಗಯ್ಯ

**3.** ರಾಘವಾಂಕನು ಯಾವ ಕವಿಯ ಸೋದರಳಿಯನಾಗಿದ್ದನು ?

(ಅ) ಪಂಪ (ಆ) ರಾಘವಾಂಕ ಶ್ರೀ (ಇ) ಹರಿಹರ (ಈ) ಲಕ್ಷ್ಮೀಶ

**4.** ಕುವೆಂಪು ಅವರ ಒಂಟಿ ಕೊಪ್ಪಲಿನ ಮನೆಯ ಹೆಸರೇನು ?

(ಅ) ರವಿಕಿರಣ (ಆ) ಸೂರ್ಯೋದಯ (ಇ) ಸೂರ್ಯರಶ್ಮಿ (ಈ) ಉದಯರವಿ

**5.** ಬಸಯ್ಯನ ಹೆಂಡತಿಯ ಹೆಸರೇನು ?

(ಅ) ಪಾರ್ವತಮ್ಮ (ಆ) ಶಿವಮ್ಮ (ಇ) ಕೂಸಮ್ಮ (ಈ) ಸೀತಮ್ಮ

**6.** 'ಈ ಸಭಾಗೃಹದಲ್ಲಿರುವ ಸಭಾಸದರಲ್ಲಿ ಅರ್ಧದಷ್ಟು ಜನರು ಕತ್ತೆಗಳು' ಎಂದು ಹೇಳಿದ ಸುಪ್ರಸಿದ್ಧ ನಾಟಕಕಾರ ಯಾರು ?

(ಅ) ನಾ. ಕಸ್ತೂರಿ (ಆ) ಷೆಲ್ಲಿ

(ಇ) ಷೆರಿಡನ್ (ಈ) ಷೆರ್ಲಾಕ್ ಹೋಮ್ಸ್

[ Turn over

https://www.tamilnaduboard.com

7. ರೂಢನಾಮಕ್ಕೆ ಯಾವ ಪದ ಉದಾಹರಣೆಯಾಗಿದೆ ?
(ಅ) ರೇಖಾ (ಆ) ಕುಂಟ (ಇ) ಮರ (ಈ) ಚಾಲಕ

8. ಸುರೇಶನು ಶಾಲೆಗೆ ಹೋಗುವನು – ಈ ವಾಕ್ಯವು ಯಾವ ಕಾಲವನ್ನು ಸೂಚಿಸುತ್ತದೆ ?
(ಅ) ಭವಿಷ್ಯತ್ ಕಾಲ (ಆ) ವರ್ತಮಾನ ಕಾಲ (ಇ) ಸಂಧ್ಯಾಕಾಲ (ಈ) ಭೂತ ಕಾಲ

9. 'ಪುಸ್ತಕ' ಪದದ ತದ್ಭವ ಪದವೇನು ?
(ಅ) ಪುತ್ತಖ (ಆ) ಪುತ್ತಕ (ಇ) ಪೊತ್ತಗೆ (ಈ) ಹೊತ್ತಗೆ

10. ನಾಲ್ಕು ಸಾಲುಗಳಿಂದ ಕೂಡಿದ ಪದ್ಯವನ್ನು ಏನೆಂದು ಕರೆಯುವರು ?
(ಅ) ಕಂದ (ಆ) ರಗಳೆ (ಇ) ಷಟ್ಪದಿ (ಈ) ತ್ರಿಪದಿ

11. ಗುಣ ಸಂಧಿಗೆ ಕೆಳಗಿನ ಯಾವ ಪದ ಉದಾಹರಣೆಯಾಗಿದೆ ?
(ಅ) ಸನ್ಮಾನ (ಆ) ಏಕೈಕ
(ಇ) ಕಂಬನಿ (ಈ) ಚಂದ್ರೋದಯ

12. ಪೂರ್ವ ಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸಕ್ಕೆ ಯಾವ ಹೆಸರಿದೆ ?
(ಅ) ತತ್ಪುರುಷ ಸಮಾಸ (ಆ) ದ್ವಿಗು ಸಮಾಸ
(ಇ) ಕ್ರಿಯಾ ಸಮಾಸ (ಈ) ಬಹುವ್ರೀಹಿ ಸಮಾಸ

13. 'ತನಯ' ಪದದ ಅರ್ಥವೇನು ?
(ಅ) ಸೋದರಳಿಯ (ಆ) ತಾಯಿ (ಇ) ಮಗ (ಈ) ಮಗಳು

14. ಕಿಳ್ಳೆಕ್ಯಾತ ಜನಾಂಗದವರು ಮೂಲತಃ ಯಾವ ಜಿಲ್ಲೆಗೆ ಸೇರಿದವರು ?
(ಅ) ರತ್ನಗಿರಿ (ಆ) ಶಿವಮೊಗ್ಗ (ಇ) ಕೊಲ್ಲಾಪುರ (ಈ) ಕೊಡಗು

## ಭಾಗ - II/PART - II
### ವಿಭಾಗ - 1/SECTION - 1

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 3** ಕ್ಕೆ ಮಾತ್ರ **ಒಂದೆರಡು** ವಾಕ್ಯಗಳಲ್ಲಿ ಉತ್ತರಿಸಿರಿ. **3x2=6**
Answer **any 3** of the following questions in **one** or **two** sentence each.

15. ಶ್ರೀ ಭಾರತಿ ಭಾಷೆಗಳ ಕಾಂತಿಯಲ್ಲಿ ಹೇಗೆ ತೋರುತ್ತಿದ್ದಾಳೆ ?

16. ರಾಜ್ಯಮೋಹ ತೊರೆದ ಬಾಹುಬಲಿ ಏನು ಮಾಡಲು ನಿರ್ಧರಿಸಿದನು ?

17. ಶಿಶು ಮಕ್ಕಳು ಹೂ ತರಲು ಎಲ್ಲಿಗೆ ಹೋಗಿದ್ದರು ?

18. ದರ್ಭೆಯನ್ನು ಕೊಯ್ದು ಯಾರಿಗೆ ಕೊಡಬೇಕೆಂದು ಲೋಹಿತಾಶ್ವ ಯೋಚಿಸಿದನು ?

https://www.tamilnaduboard.com

## ವಿಭಾಗ - 2/SECTION - 2

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2** ಕ್ಕೆ ಮಾತ್ರ ಉತ್ತರ ಬರೆಯಿರಿ. **2x2=4**
Answer **any 2** of the following questions.

**19.** ಡಾ. ಜಿ.ಎಸ್. ಶಿವರುದ್ರಪ್ಪ ಅವರ ಪ್ರಥಮ ಕವನ ಸಂಗ್ರಹ ಯಾವುದು ?

**20.** ಊರ ರೋಡಿನ ಸುದ್ದಿ ಹೇಗೆ ಹರಡಿತು ?

**21.** ಹುಡುಗರು ಹಿರೇಜೇನನ್ನು ಓಡಿಸಲು ಏನು ಮಾಡಿದರು ?

## ವಿಭಾಗ - 3/SECTION - 3

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 7** ಕ್ಕೆ ಮಾತ್ರ ಉತ್ತರ ಬರೆಯಿರಿ. **7x2=14**
Answer **any 7** of the following questions.

**22.** ಹೊಂದಿಸಿ ಬರೆಯಿರಿ.

| | | |
|---|---|---|
| ನೆಲೆಸುಗೆ ನಿನ್ನ ವೃಕ್ಷದೊಳ್ | – | ಎಂ.ಎಸ್. ಸುಂಕಾಪುರ |
| ತೊಗಲು ಗೊಂಬೆಯಾಟ | – | ಸೇಡಿಯಾಪು ಕೃಷ್ಣಭಟ್ಟ |
| ನಗು–ಅಳು | – | ಪಂಪ |
| ಜಯ ಭಾರತ ಪುತ್ರ | – | ಗೊ.ರು. ಚನ್ನಬಸಪ್ಪ |

**23.** ರತ್ನ, ರಾಜ – ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

**24.** ಆಸಕ್ತಿ, ವಿಷ – ಈ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

**25.** ಗುಂಪುಗೂಡಿ, ಕಾಳೋರಗ – ಈ ಪದಗಳನ್ನು ಬಿಡಿಸಿ ಬರೆದು ಸಂಧಿ ತಿಳಿಸಿರಿ.

**26.** ಸಿರಿ, ಕಜ್ಜ – ಈ ಪದಗಳ ತತ್ಸಮ ರೂಪಗಳನ್ನು ಬರೆಯಿರಿ.

**27.** ದನದೊಳ್ ಲಂಪಟರಿದೇಕೆಯೋ ನರಪಶುಗಳ್ – ಈ ಸಾಲಿಗೆ ಪ್ರಸ್ತಾರ ಹಾಕಿರಿ.

**28.** ಕೆಳಗಿನ ಆಂಗ್ಲ ಗಾದೆಮಾತುಗಳಿಗೆ ತಕ್ಕ ಕನ್ನಡ ಗಾದೆಗಳನ್ನು ಬರೆಯಿರಿ.
(ಅ) Do or Die
(ಆ) Work is Worship

**29.** ಸಾಹಸ, ಬೆನ್ನುಬೀಳು – ಈ ಪದಗಳನ್ನು ಉಪಯೋಗಿಸಿ ಸ್ವಂತವಾಕ್ಯ ರಚಿಸಿರಿ.

**30.** ಮುಕ್ಕಾಲು, ಹೆಮ್ಮರ – ಈ ಪದಗಳ ವಿಗ್ರಹವಾಕ್ಯ ಬರೆದು ಸಮಾಸ ತಿಳಿಸಿರಿ.

[ Turn over

https://www.tamilnaduboard.com

## ಭಾಗ - III/PART - III

### ವಿಭಾಗ - 1/SECTION - 1

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **2x4=8**
Answer **any 2** of the following questions in brief.

**31.** ಸೇಡಿಯಾಪು ಕೃಷ್ಣಭಟ್ಟರು ಯಾರು ಯಾರನ್ನು ಭಾರತವೆಂಬ ಬೋಧೀ ವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾರೆ ?

**32.** ಜನರು ಹೇಗೆ ಬದಲಾವಣೆಯಾಗಬೇಕೆಂದು ಸಿದ್ಧಲಿಂಗಯ್ಯನವರು ತಿಳಿಸಿದ್ದಾರೆ ?

**33.** ಭರತನಲ್ಲಿ ಬಾಹುಬಲಿಯು ಏನೆಂದು ಕ್ಷಮೆ ಕೇಳುವನು ?

**34.** ಕಾಡಿನಿಂದ ಲೋಹಿತಾಶ್ವ ಬರದಿದ್ದಾಗ ಚಂದ್ರಮತಿ ಏನೆಂದು ಚಿಂತಿಸಿದಳು ?

### ವಿಭಾಗ - 2/SECTION - 2

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **2x4=8**
Answer **any 2** of the following questions in brief.

**35.** 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ' ಎನ್ನುವ ಕವನದ ರಚನೆಯ ಸಂದರ್ಭವನ್ನು ತಿಳಿಸಿರಿ.

**36.** ಚಾವಡಿಯಲ್ಲಿ ನಡೆದ ವಿಚಾರಣೆಯನ್ನು ಸಂಗ್ರಹಿಸಿ.

**37.** ಸೀತಮ್ಮನ ಆಕಳು ಸಾಯಲು ಕಾರಣವಾದ ಸಂಗತಿಯೇನು ?

**38.** ನಗು ಮತ್ತು ಅಳುಗಳನ್ನು ಸಮನ್ವಯ ದೃಷ್ಟಿಯಿಂದ ಸ್ವೀಕರಿಸುವುದು ಹೇಗೆ ?

### ವಿಭಾಗ - 3/SECTION - 3

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 3** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **3x4=12**
Answer **any 3** of the following questions in brief.

**39.** ಭಾಮಿನಿ ಷಟ್ಪದಿಯ ಲಕ್ಷಣ ಬರೆದು ಉದಾಹರಣೆ ನೀಡಿರಿ.

**40.** ಉಪಮಾ ಅಲಂಕಾರದ ಲಕ್ಷಣ ಬರೆದು ಉದಾಹರಣೆ ತಿಳಿಸಿರಿ.

**41.** ಜನರಲ್ಲಿ, ತೊಗಲು ಗೊಂಬೆಯಾಟದಿಂದ ಯಾವ ತೊಂದರೆಗಳಿಂದ ಪಾರಾಗಬಹುದೆಂಬ ನಂಬಿಕೆಯಿದೆ ? ವಿವರಿಸಿರಿ.

**42.** ಶಬರಿಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿರಿ.

**43.** ಉಪ್ಪು ತಿಂದವ ನೀರು ಕುಡಿಯಲೇ ಬೇಕು, ಹಾಸಿಗೆಯಿದ್ದಷ್ಟು ಕಾಲು ಚಾಚು – ಈ ಗಾದೆಮಾತುಗಳನ್ನು ಸಂಕ್ಷಿಪ್ತವಾಗಿ ವಿಸ್ತರಿಸಿರಿ.

https://www.tamilnaduboard.com

## ಭಾಗ - IV/PART - IV

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **3x6=18**

Answer the following questions.

**44.** (a) ಬಾಹುಬಲಿಯು ತಪಸ್ಸಿಗೆ ಹೋಗಲು ನಿಶ್ಚಯಿಸಿದ್ದು ಏಕೆ ? ವಿವರಿಸಿರಿ.

**ಅಥವಾ**

(b) ಮಾದೇವ ಶಿಷ್ಯರನ್ನು ಹೇಗೆ ಸಲುಹಿದನು ?

**45.** (a) ಹುಡುಗರು ಜೇನು ಹುಳುಗಳನ್ನು ಓಡಿಸಲು ಎರಡು ಬಾರಿ ನಡೆಸಿದ ಪ್ರಯತ್ನ ಹಾಗೂ ಅದರ ಪರಿಣಾಮವನ್ನು ವಿವರಿಸಿರಿ.

**ಅಥವಾ**

(b) 'ಡಾಂಬರು ಬಂದುದು' – ಕತೆಯ ಸ್ವಾರಸ್ಯವನ್ನು ಸಂಗ್ರಹಿಸಿರಿ.

**46.** (a) ತೊಗಲು ಗೊಂಬೆಯಾಟದವರ ವೇಷಭೂಷಣಗಳನ್ನು ಕುರಿತು ಬರೆಯಿರಿ.

**ಅಥವಾ**

(b) ಶಬರಿಯು ಸಾವನ್ನಪ್ಪಿದ ಸಂದರ್ಭವನ್ನು ವಿವರಿಸಿರಿ.

## ಭಾಗ - V/PART - V

ಕೆಳಗಿನ ಪದ್ಯಭಾಗಗಳನ್ನು ಪೂರ್ತಿಗೊಳಿಸಿರಿ. **3+3=6**

Fill up the lines of following poems.

**47.** (a) ಮಾರಾಟಕ್ಕಿಟ್ಟವರು . . . . . . . . . . . .
. . . . . . . . . . . . . . . . . . . .
. . . . . . . . . . . . . . ಕೊಳ್ಳುವವರು.

(b) ಹೆಸರು . . . . . . . . . . . . . . . . .
. . . . . . . . . . . . . . . . . . . .
. . . . . . . . . . . . . . ನಗಬಹುದು.

- o O o -

https://www.tamilnaduboard.com